| Published Date: | 8 Aug 2018 | Publication: | Vijaya Karnataka (Kannada) |
|---|---|---|---|
| Edition: | Bangalore | Page No: | 12 |
| MAV/CCM: | 60896/13.84 | Circulation: | 296848 |

# ಸೇಂಟ್ ಪಾಲ್ ಶಾಲಾ ತಂಡ ಆಯ್ಕೆ

**ಬೆಂಗಳೂರು:** ಟಾಟಾ ಕನ್ಸಲ್ಟನ್ಸಿ ಸರ್ವೀಸಸ್ ಸಂಸ್ಥೆಯು 8ನೇ ತರಗತಿಯಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗಾಗಿ ಮಂಗಳವಾರ ನಗರದಲ್ಲಿ ಏರ್ಪಡಿಸಿದ್ದ ಅಂತರ ಶಾಲಾ ರಸಪ್ರಶ್ನೆ ಸ್ಪರ್ಧೆಯಲ್ಲಿ ಜೆ.ಪಿ. ನಗರದ ಸೇಂಟ್ ಪಾಲ್ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳಾದ ಸುಚಿತ್ ಹೆಗಡೆ ಮತ್ತು ರಾಜಶಂಕರ್ ಪ್ರಥಮ ಸ್ಥಾನ ಪಡೆದು ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾದರು.

ನಗರದ ವೈಯಾಲಿಕಾವಲ್‌ನ ಚೌಡಯ್ಯ ಸ್ಮಾರಕ ಭವನದಲ್ಲಿ ಮಂಗಳವಾರ ರಸಪ್ರಶ್ನೆ ಸ್ಪರ್ಧೆ ನಡೆಯಿತು. ಬೆಂಗಳೂರಿನ ನೂರು ಶಾಲೆಗಳಿಂದ 1000 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೊದಲ ಸ್ಥಾನ ಪಡೆದ ವಿದ್ಯಾರ್ಥಿ ತಂಡಕ್ಕೆ 60 ಸಾವಿರ ಮೌಲ್ಯದ ಗಿಫ್ಟ್ ವೋಚರ್ ನೀಡಲಾಯಿತು. ರನ್ನರ್ ಅಪ್ ಪಡೆದ ಬನ್ನೇರುಘಟ್ಟ ಮುಖ್ಯರಸ್ತೆಯ ಪಿಎಸ್‌ಬಿಬಿ-ಎಲ್‌ಎಲ್‌ಎ ಶಾಲೆಯ ಆರ್ಯನ್ ಪಾಟೀಲ್ ಮತ್ತು ಪ್ರಣವ್ ಪ್ರಭು ಅವರಿಗೆ 40 ಸಾವಿರ ರೂ.ನ ಗಿಫ್ಟ್ ವೋಚರ್ ೀಡಲಾಯಿತು. ವಿಜೇತರಿಗೆ ಟಿಸಿಎಸ್ ಬೆಂಗಳೂರಿನ ಉಪಾಧ್ಯಕ್ಷ ನಾಗರಾಜ್ ಇಜಾರಿ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

1/1